<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 314/2015 ಸಿಡಬ್ಲೂ: 1 ಪಿಡಬ್ಲೂ: 7

ಪ್ರಮಾಣವಚನ ಬೋಧಿಸಲಾಯಿತು ದಿಃ 02-07-2025

ಹೆಸರು : ಚಂದ್ರಕಾಂತ

ತಂದೆ ಹೆಸರು : ಭೀಮರೆಡ್ಡಿ

ವಯಸ್ಸು : 58 ವರ್ಷ

ಉದ್ಯೋಗ : ಹಿರಿಯ ಉಪನ್ಯಾಸಕರು, ಯಾದಗಿರಿ

ವಾಸಸ್ಥಳ : ಯಾದಗಿರಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ಸನ್ 2011 ರಿಂದ ಸನ್ 2016 ರ ವರೆಗೆ ಸೇಡಂ ಕ್ಷೇತ್ರ ಶಿಕ್ಷಣಾಧಿಕಾರಿ ಎಂದು ಸೇವೆಯನ್ನು ಸಲ್ಲಿಸಿರುತ್ತೇನೆ.

1 ಮತ್ತು 2 ನೇ ಆರೋಪಿತನು ನನಗೆ ಗೊತ್ತು. ಸರ್ವ ಶಿಕ್ಷಣ ಅಭಿಯಾನ ಯೊಜನಾ ಅಡಿಯಲ್ಲಿ ವಿವಿಧ ಶಾಲೆಗಳಿಗೆ ಶಾಲಾ ಅನುದಾನ ಹಾಗೂ ಶಾಲಾ ಕಟ್ಟಡ ಹಾಗೂ ಡ್ಯುಯಲ್ ಡೆಸ್ಕ ಕೆಲಸಗಳಿಗೆ ನೇರವಾಗಿ ರಾಜ್ಯ ಸರ್ಕಾರದಿಂದ ವಿವಿದ ಶಾಲೆಯ ಮುಖೋಪಾಧ್ಯಾಪಕರು ಹಾಗೂ ಎಸ್ ಡಿ ಎಂ ಸಿ ಅಧ್ಯಕ್ಷ ಜಂಟಿ ಖಾತೆಗೆ ಜಮಾ ಹಾಗುತ್ತಿತು. ಸನ್ 2010 ರಿಂದ 2011 ಸಾಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಿಲಾಕಲ್ ರವರ ಮುಖೊಪಾಧ್ಯಾಪಕರು ಹಾಗೂ ಎಸ್ ಡಿ ಎಂ ಸಿ ಜಂಟಿ ಖಾತೆಗೆ ರೂ. 11,00,375/- ಗಳು ಜಮಾ ಮಾಡಲಾಗಿತ್ತು. ಮುಂದುವರೆದು ಆರೋಪಿತರು ಹಂತ ಹಂತವಾಗಿ ಸನ್ 2010 ರಿಂದ 2012 ರ ವರೆಗೂ ಬೇರೆ ಬೇರೆ ದಿನಾಂಕದಂದು ಹಣವನ್ನು ಡ್ರಾ ಮಾಡಿಕೊಂಡಿರುತ್ತಾರೆ. ನಾವು ಸದರಿ ಕೆಲಸವನ್ನು ಆಗಿದೆಯೇ ಅಥವಾ ಇಲ್ಲವೋ ಎಂಬುದರ ಬಗ್ಗೆ ನಮ್ಮ ಸಂಬಂದ ಪಟ್ಟ ಬಿ ಆರ್ ಪಿ ಮತ್ತು ಇ ಸಿ ಓ ಮತ್ತು ಸಿ ಆರ್ ಪಿ ರವರಿಂದ ಹಾಗೂ ಅವರ ಜೊತೆಯಲ್ಲಿ ಒಬ್ಬ ಅಭಿಯಂತರರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ.

ಸದರಿ ವರದಿ ಆದಾರದ ಮೇಲೆ ಆರೋಪಿತರು ಒಟ್ಟು ರೂ.11,00,375/- ಗಳ ಪೈಕಿ ರೂ.4,42,124/- ಮಾತ್ರ ಕೆಲಸ ಮಾಡಿರುತ್ತಾರೆ. ಇನ್ನೂಳಿದ 6 ಲಕ್ಷ ಚಿಲ್ಲರೆ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಎಲ್ಲಾ ದಾಖಲಾತಿಯ ಆದಾರಗಳ ಮೇಲೆ ನಾವು

ಆರೋಪಿತರಿಗೆ 2 ರಿಂದ 3 ಭಾರಿ ನೋಟೀಸು ಹಾಗೂ ಕಾರಣ ಕೇಳುವ ನೋಟೀಸನ್ನು ಸಂಬಂದ ಪಟಟ ಮುಖೋಪಾಧ್ಯಾಯರಿಗೆ ಹಾಗೂ ಎಸ್ ಡಿ ಎಂ ಸಿ ಅಧ್ಯಕ್ಷರಿಗೆ ಜಾರಿ ಮಾಡಿದ್ದೇನೆ. ನಂತರ ಆರೋಪಿತರು ಯಾವುದೇ ಉತ್ತರ ನೀಡದೇ ಇರುವುದರಿಂದ ದಿ.29-01-2013 ರಂದು ಸದರಿ ಮುಖೋಪಾದ್ಯಪಾಕ ಹಾಗೂ ಎಸ್ ಡಿ ಎಂ ಸಿ ಅಧ್ಯಕ್ಷರ ವಿರುದ್ದ ದೂರನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 7(ಎ ಮತ್ತು ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ ಪಿ 3 ರಿಂದ 6 ರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 3(ಬಿ) ಯಿಂದ ನಿ ಪಿ 6(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಆರಕ್ಷಕ ನೀರೀಕ್ಷಕರು ಸೇಡಂ ಪೋಲೀಸ್ ಠಾಣೆರವರಿಗೆ ಹಣ ದುರುಪಯೋಗ ಆಗಿರುವ ಬಗ್ಗೆ ಆಡಿಟ್ ವರದಿ ಸಲ್ಲಿಸುವ ಕುರಿತು ಕಳುಹಿಸಲಾದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಹಾಗೂ ಅವರ ಸಹಿಯನ್ನು ನಿ ಪಿ 8(ಎ) ಎಂದು ಗುರುತಿಸಲಾಯಿತು. ಅದೇ ರೀತಿ 2 ನಕ್ಷೆಗಳನ್ನು ನೋಡಿ ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ ನಿ ಪಿ 9 ಮತ್ತು ನಿಪಿ 10 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಅವುಗಳನ್ನು ಕ್ರಮವಾಗಿ ನಿ ಪಿ 9(ಎ) ಮತ್ತು ನಿ ಪಿ 10(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ:

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**